

## ನೀ ನನಗಿದ್ದರೆ, ನಾ ನಿನಗೆ!

ಮುಗಿಲನ್ನು ಮುಟ್ಟಲು ಹೊರಟ ಈ ಬಳ್ಳಿಯಾಕಾರದ ಈ ಗಿಡ ಹಾಗೂ ಮುಪ್ಪಿನಲ್ಲಿರುವ ಚಿಮಣಿಯ ದೃಶ್ಯವನ್ನೊಮ್ಮೆ ದಿಟ್ಟಿಸಿದಾಗ ಯಾವುದು ಯಾವುದಕ್ಕೆ ಆಧಾರ ಎಂದು ಹೇಳುವುದು ಕಷ್ಟ. ಚಿಮಣಿ ಯೌವನದಲ್ಲಿದ್ದಾಗ ಈ ಬಳ್ಳಿಯಾಕಾರದ ಗಿಡವನ್ನು ಅಪ್ಪಿ ಆನಂದಿಸಿರಬೇಕು! ಅಂತೆಯೇ ಬಳ್ಳಿಯಾಕಾರದ ಗಿಡ ಚಿಮಣಿಯನ್ನು ಆಲಂಗಿಸಿ ಚಿಮಣಿಯ ನೆತ್ತಿಯನ್ನು ಮುತ್ತಿಕ್ಕಿರಬೇಕು! ಈಗ ಎರಡಕ್ಕೂ ವಯಸ್ಸಾಗಿದೆ. ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಬಳ್ಳಿಯಾಕಾರದ ಗಿಡಕ್ಕೆ ಚಿಮಣಿ ಆಧಾರವೋ, ಸಂಧ್ಯಾಕಾಲವನ್ನು ತಲುಪಿದ ಚಿಮಣಿಗೆ ಬಳ್ಳಿಯಾಕಾರದ ಗಿಡ ಆಧಾರವೋ ಗೊತ್ತಿಲ್ಲ. ನೀ ನನಗಿದ್ದರೆ, ನಾ ನಿನಗೆ! ಎನ್ನುವ ಚಿಂತನೆ ಇಲ್ಲಿ ಅಡಕವಾಗಿರುವುದನ್ನು ಕಾಣಬಹುದಾಗಿದೆ.

ಶೇಕ್ಸ್‌ಪಿಯರ್ ಹೇಳುವಂತೆ ದಂಪತಿಗಳಲ್ಲಿ ನಿಜವಾದ ಪ್ರೀತಿ ಉಕ್ಕುವುದು ಅರವತ್ತರ ನಂತರದ ವಯಸ್ಸಿನಲ್ಲಿ ಎಂಬ ಸತ್ಯ ಈ ಬಳ್ಳಿಯಾಕಾರದ ಗಿಡ ಮತ್ತು ಮುಪ್ಪಿನಲ್ಲಿರುವ ಚಿಮಣಿ ಮತ್ತೆ ಮತ್ತೆ ನಮಗೆ ಹೇಳುವಂತಿದೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ನೇಗಿಲು ಹಿಡಿದ ರೈತ, ಖಡ್ಗ ಹಿಡಿದ ಸೈನಿಕ!

ಕೃಷಿ ಕಾಯಕದಲ್ಲಿ ತೊಡಗಿರುವ ರೈತರು ಹಾಗೂ ಯುದ್ಧಭೂಮಿಯಲ್ಲಿ ಕಾದಾಡುತ್ತಿರುವ ಸೈನಿಕರು, ಅಶ್ವಾರೋಹಿ ಸಮರವೀರರು. ಎರಡೂ ಭಿನ್ನ ಜಗತ್ತನ್ನು ಜೀವಂತಿಕೆಯಿಂದ ಕಟ್ಟಿಕೊಡುವ ಕಲಾಕೃತಿಗಳು ನಿಜಕ್ಕೂ ಅಚ್ಚರಿ ಮೂಡಿಸುತ್ತವೆ.



## ಅಪರೂಪದ ಕ್ಯಾಕ್ಟಸ್ ಹೂವು

ಅಪರೂಪವಾಗಿ ಹೂವು ಬಿಟ್ಟರೂ, ತನ್ನದೇ ಆದ ವೈಶಿಷ್ಟ್ಯದಿಂದ ಖ್ಯಾತಿಯಿಂದ ಕ್ಯಾಕ್ಟಸ್ ಗಿಡಗಳು ಮನಸೆಳೆಯುತ್ತವೆ. ಮುಳ್ಳುಗಳಿಂದ ಕೂಡಿರುವ ಕ್ಯಾಕ್ಟಸ್‌ಗಳಲ್ಲಿ ಹಲವು ವಿಧಗಳಿವೆ.

ನಮ್ಮ ಮನೆಯ ತಾರಸಿ ತೋಟದಲ್ಲಿ ದುಂಡನೆಯ ಕ್ಯಾಕ್ಟಸ್ ಗಿಡಗಳನ್ನು ಬೆಳೆಸಿದ್ದೇವೆ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಹೂ ಬಿಡುವ ಕ್ಯಾಕ್ಟಸ್ ಗಿಡಗಳು ಪ್ರೌಢಾವಸ್ಥೆಗೆ ತಲುಪಿ ಹೂವು ಬಿಡಲು 5 ವರ್ಷಗಳು ಬೇಕು. ನಾವು ಬೆಳೆಸಿರುವ ಕ್ಯಾಕ್ಟಸ್ 10 ವರ್ಷಗಳ ನಂತರ ಮೊದಲ ಬಾರಿಗೆ ಹೂವು ಬಿಟ್ಟಿದ್ದು, ಶುಭ್ರ ಶ್ವೇತವರ್ಣದ ಹೂವು ಬಿಟ್ಟಿದ್ದು, ನೋಡಲು ಬ್ರಹ್ಮ ಕಮಲದಂತಿದೆ. ಹಲವು ಮೊಗ್ಗುಗಳೂ ಮೂಡಿವೆ. ಬೆಳಿಗ್ಗೆ ಹೂವು ಅರಳಿದಾಗ ಮನೆ ಮಂದಿಯೆಲ್ಲಾ ಸಂತೋಷಪಟ್ಟೆವು. ಆದರೆ ಹನ್ನೆರಡು ಗಂಟೆಯ ನಂತರ ಅದು ಬಾಡತೊಡಗಿದಾಗ ಮನಸ್ಸಿಗೆ ಬೇಸರವಾಯಿತು.

–ಕೆ. ಶ್ರೀಧರ, ಚಿಂತಾಮಣಿ

